ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ
ನಿರ್ದೇಶಕರ ಕಛೇರಿ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ,
ನಂ.16/2ಬಿ, 3ನೇ ಮಹಡಿ, ಡಾ.ಬಿ.ಆರ್.ಅಂಬೇಡ್ಕರ್ ಭವನ, ಮಿಲ್ಲರ್ಸ್ ರಸ್ತೆ, ವಸಂತನಗರ,ಬೆಂಗಳೂರು-560052.
ದೂರವಾಣಿ ಸಂಖ್ಯೆ: 080-22204821
E-mail – ambedkarbhavana@gmail.com

ಸಂ:ಅಂಸಂ.ಸಂ/ಸಿಬ್ಬಂದಿ/ಸಿಆರ್-16/2020-21(ಭಾಗ-2)

ದಿನಾಂಕ:05-07-2022

## ಕಾರ್ಯಾದೇಶ

ವಿಷಯ: ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯ ಕ್ರ.ಸಂ 96 ರಲ್ಲಿ ಬರುವ ಸಿಳ್ಳೇಕ್ಯಾತಾಸ್ ಜಾತಿಯ ಪರ್ಯಾಯ ಪದಗಳಾದ ಕಿಳ್ಳೇಕ್ಯಾತ, ಕಟಬು, ಕಟಬರ್, ಬುಂಡೆಬೆಸ್ತ, ಜಾಲಗಾರ್ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನ ನಡೆಸುವ ಬಗ್ಗೆ.

ಉಲ್ಲೇಖ: 1)ಈ ಕಛೇರಿಯ ಸಮ ಸಂಖ್ಯೆ ಕಾರ್ಯಾದೇಶ ದಿ: 17-08-2021.
2)ಸರ್ಕಾರದ ಆದೇಶ ಸಂ: ಸಕಇ 482 ಎಸ್ಎಲ್‌ಪಿ 2022 ದಿನಾಂಕ 29-06-2022.

12/7/2022

*****

ಸಿಳ್ಳೇಕ್ಯಾತಾಸ್ ಸಮುದಾಯದ ಪರ್ಯಾಯ ಪದಗಳಾದ ಕಿಳ್ಳೇಕ್ಯಾತ, ಕಟಬು, ಕಟಬರ್, ಬುಂಡೆಬೆಸ್ತ, ಜಾಲಗಾರ್ ಜಾತಿಗಳ ಬಗ್ಗೆ ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ರವರ ಮುಖಾಂತರ ನಡೆಸುವಂತೆ ಉಲ್ಲೇಖ (1) ರಲ್ಲಿ ಕಾರ್ಯಾದೇಶ ನೀಡಲಾಗಿತ್ತು. ಆದರೆ ಸದರಿ ವಿಶ್ವವಿದ್ಯಾಲಯದವರು ಮಾನವ ಶಾಸ್ತ್ರಜ್ಞರಿಗೆ ಬದಲಾಗಿ, ಸಮಾಜ ಶಾಸ್ತ್ರಜ್ಞರ ಮುಖಾಂತರ ನಡೆಸುವುದಾಗಿ ತಿಳಿಸಿರುತ್ತಾರೆ. ಈ ಅಧ್ಯಯನವನ್ನು ಮಾನವ ಶಾಸ್ತ್ರಜ್ಞರಿಂದ ಮಾಡಿಸುವಂತೆ ಹಾಗೂ ಮೈಸೂರು ವಿಶ್ವವಿದ್ಯಾಲಯದ ಮಾನವ ಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಎಂ.ಆರ್.ಗಂಗಾಧರ್ ಇವರಿಂದ ನಡೆಸುವಂತೆ ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ ಸೂಚಿಸಿರುವ ಮೇರೆಗೆ ಉಲ್ಲೇಖ(1)ರ ಕಾರ್ಯಾದೇಶವನ್ನು ರದ್ದುಪಡಿಸಿ, ಸರ್ಕಾರದ ಆದೇಶದಂತೆ Sillekyathas ಜಾತಿಯ ಪರ್ಯಾಯ ಪದಗಳಾದ ಕಿಳ್ಳೇಕ್ಯಾತ, ಕಟಬು, ಕಟಬರ್, ಬುಂಡೆಬೆಸ್ತ, ಜಾಲಗಾರ್ ಜಾತಿಗಳನ್ನು ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರ್ಪಡೆ ಮಾಡುವ ಪ್ರಸ್ತಾವನೆಯನ್ನು ಪರಿಶೀಲಿಸಲು ಸದರಿ ಜನಾಂಗಗಳ ಆಚಾರ-ವಿಚಾರ, ಭಾಷೆ, ಸಾಮಾಜಿಕ, ಶೈಕ್ಷಣಿಕ,ಆರ್ಥಿಕ ಸ್ಥಿತಿಗತಿ, ಭೌಗೋಳಿಕ ಅಂಶಗಳ ಕುರಿತಂತೆ ಕುಲಶಾಸ್ತ್ರೀಯ ಅಧ್ಯಯನವನ್ನು ನಡೆಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಕಾರ್ಯಾದೇಶ ನೀಡಲಾಗಿದೆ.

1. ಸಿಳ್ಳೇಕ್ಯಾತಾಸ್ ಸಮಾನಾಂತರ ಪದಗಳನ್ನು ಪರಿಶಿಷ್ಟ ಜಾತಿಗೆ ಸೇರಿಸಬಹುದೇ ಎಂಬ ಕುರಿತಂತೆ ವರದಿಯಲ್ಲಿ ಸ್ಪಷ್ಟ ಅಭಿಪ್ರಾಯ ನಮೂದಿಸತಕ್ಕದ್ದು.
2. ಈ ಕಾರ್ಯಾದೇಶ ಸ್ವೀಕರಿಸಿದ ನಂತರ ರೂ.200/- ರ ಛಾಪಾ ಕಾಗದದಲ್ಲಿ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು.
3. ಈ ಒಡಂಬಡಿಕೆಯು ಯಾವುದಾದರೂ ಕಾರಣಕ್ಕಾಗಿ ರದ್ದಾಗುವ ಪ್ರಸಂಗವಿದ್ದಲ್ಲಿ ಕುಲಶಾಸ್ತ್ರೀಯ ಅಧ್ಯಯನಕ್ಕೆ ನೀಡಿದ ಹಣವನ್ನು ಪೂರ್ಣವಾಗಿ ಇಲಾಖೆಗೆ ವಾಪಸ್ಸು ನೀಡತಕ್ಕದ್ದು.
4. ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆವತಿಯಿಂದ ಅಧ್ಯಯನಕ್ಕೆ ನಿಗದಿಪಡಿಸಿದ ವೆಚ್ಚ ರೂ. 10,15,875/-ಗಳನ್ನು (ರೂಪಾಯಿ ಹತ್ತು ಲಕ್ಷದ ಹದಿನೈದು ಸಾವಿರದ ಎಂಟುನೂರ ಎಪ್ಪತ್ತೈದು ಮಾತ್ರ) ಹೊರತುಪಡಿಸಿ ಈ ಸಂಸ್ಥೆಯು ಇತರೆ ಯಾವುದೇ ವೆಚ್ಚವನ್ನು ಭರಿಸುವುದಿಲ್ಲ.

Research

Registrar Personal Section

Scanned with CamScanner

5. ಈ ಅಧ್ಯಯನಕ್ಕೆ ನಿಗಧಿಪಡಿಸಿರುವ ಮೊತ್ತದಲ್ಲಿ ಶೇ.25 ರಷ್ಟು ಮೊತ್ತವನ್ನು ಪ್ರಾರಂಭದಲ್ಲಿ ನೀಡಲಾಗುವುದು.

6. ಸಿಳ್ಳೇಕ್ಯಾತಾಸ್ ಸಮಾನಾಂತರ ಪದಗಳನ್ನು ಪರಿಶಿಷ್ಟ ಜಾತಿಗೆ ಸೇರಿಸುವ ಕುರಿತಂತೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳ ಬಗ್ಗೆ ಕುಲಶಾಸ್ತ್ರೀಯ ಅಧ್ಯಯನವನ್ನು ಅತ್ಯಂತ ವೈಜ್ಞಾನಿಕವಾಗಿ ಸತ್ಯನಿಷ್ಠೆ ಮತ್ತು ದಕ್ಷತೆಯಿಂದ ನಿರ್ವಹಿಸುವುದು.

7. ಸದರಿ ಅಧ್ಯಯನದ ಬಗ್ಗೆ ಕಾರ್ಯಾದೇಶ ನೀಡಿದ ದಿನಾಂಕದಿಂದ ಆರು ತಿಂಗಳೊಳಗೆ ಅಧ್ಯಯನ ಕಾರ್ಯವನ್ನು ಪೂರ್ಣಗೊಳಿಸಿ ವರದಿ ಸಲ್ಲಿಸತಕ್ಕದ್ದು. ಒಂದುವೇಳೆ ಹೆಚ್ಚಿನ ಕಾಲಾವಕಾಶ ಬೇಕಿದ್ದಲ್ಲಿ ಮುಂಚಿತವಾಗಿ ಲಿಖಿತ ರೂಪದಲ್ಲಿ ಈ ಸಂಸ್ಥೆಗೆ ತಿಳಿಸತಕ್ಕದ್ದು.

8. ಕರಡು ವರದಿಯನ್ನು ತಜ್ಞರ ಸಮಿತಿ ಸದಸ್ಯರು ಪರಿಶೀಲಿಸಿ ಅಭಿಪ್ರಾಯ ನೀಡಿದ ನಂತರ ಅಂತಿಮ ವರದಿಯನ್ನು ಕನ್ನಡ ಭಾಷೆ ಹಾಗೂ ಆಂಗ್ಲ ಭಾಷೆಯಲ್ಲಿ ತಯಾರಿಸಿ ತಲಾ ಐದು ಪ್ರತಿಗಳನ್ನು ಸಾಫ್ಟ್ ಕಾಪಿಯೊಂದಿಗೆ ಸಲ್ಲಿಸತಕ್ಕದ್ದು.

6/7/2022

ನಿರ್ದೇಶಕರು
ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ,
ಬೆಂಗಳೂರು.

<u>ಪ್ರತಿಗಳನ್ನು ಈ ಕೆಳಕಂಡವರಿಗೆ ಮಾಹಿತಿಗಾಗಿ ಸಲ್ಲಿಸಿದೆ:-</u>

1. ಮಹಾಲೇಖಪಾಲರು, (ಎ ಮತ್ತು ಇ, ಲೆಕ್ಕಪರಿಶೋಧನೆ-1 &2) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
3. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
4. ಕುಲಸಚಿವರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
5. ಕುಲ ಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
6. ಕಛೇರಿ ಪ್ರತಿ/ಇತರೆ.



Scanned with CamScanner